GULBARGA UNIVERSITY
"Jnana Ganga", Kalaburagi - 585 106
Karnataka, India.

08472-263202
Fax. 08472-263206
E-Mail: root@guluni.kar.nic.in
Grams: UNIGUL

ಕ್ರಂ.ಸಂ:ಗುವಿಕ/ಪಜಾ/ಪ.ಪಂ ಘಟಕ/ 2017-18/148 ದಿನಾಂಕ: 30/06/2017

ಗೆ,
ಸಂಪಾದಕರು. ವಿಜಯ ಕರ್ನಾಟಕ
ಪ್ರಜಾವಾಣಿ, ಸಂಜೆವಾಣಿ ದಿನಪತ್ರಿಕೆ,
ಕಲಬುರಗಿ.

ಮಾನ್ಯರೆ,

ವಿಷಯ:- ಟೆಂಡರ ಅಧಿಸೂಚನೆ ಪ್ರಕಟಿಸುವ ಕುರಿತು.

***

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ 2017-18 ನೇ ಸಾಲಿಗೆ ಗುಲಬರ್ಗಾ ವಿಶ್ವವಿದ್ಯಾಲಯದ ಆವರಣದಲ್ಲಿ ಬರುವ ಈ ಕೆಳಗೆ ನಮೂದಿಸಿದ 04 ವಸತಿ ನಿಲಯಗಳಿಗೆ ಮತ್ತು ಸ್ನಾತಕೋತ್ತರ ಕೇಂದ್ರ ರಾಯಚೂರದಲ್ಲಿರುವ ಒಂದು ವಸತಿ ನಿಲಯಕ್ಕೆ ಊಟದ ವ್ಯವಸ್ಥೆ ಮಾಡಲು ಟೆಂಡರ ಕರೆಯಲಾಗಿದ್ದು, ಸದರಿ ಟೆಂಡರ್ ಅಧಿಸೂಚನೆಯನ್ನು ಪ್ರಜಾವಾಣಿ ಮತ್ತು ಸಂಜೆವಾಣಿ ತಮ್ಮ ದಿನಪತ್ರಿಕೆಗಳಲ್ಲಿ ಪ್ರಕಟಿಸುವಂತೆ ಈ ಮೂಲಕ ತಿಳಿಸಲಾಗಿದೆ. ಟೆಂಡರ ಅಧಿಸೂಚನೆಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.

1. ಕೃಷ್ಣಾ ವಸತಿ ನಿಲಯ
2. ಕಾವೇರಿ ವಸತಿ ನಿಲಯ
3. ನೃಪತುಂಗ ವಸತಿ ನಿಲಯ
4. ಡಾ.ಬಿ.ಆರ್. ಅಂಬೇಡ್ಕರ ವಸತಿ ನಿಲಯ
5. ವಿದ್ಯಾರ್ಥಿಗಳ ವಸತಿ ನಿಲಯ ಸ್ನಾತಕೊತ್ತರ ಕೇಂದ್ರ ರಾಯಚೂರ

ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

GULBARGA UNIVERSITY
"Jnana Ganga", Kalaburagi - 585 106
Karnataka, India.

☎ 08472-263202
Fax: 08472-263206
E-Mail: root @guluni.kar.nic.in

Grams: UNIGUL

ಗುವಿಗು:ಪಜಾ/ಪ.ಪಂ ಘಟಕ/ 2017-18/47 ದಿನಾಂಕ: 30/06/2017

## ಟೆಂಡರ ಅಧಿಸೂಚನೆ

ವಿಷಯ: 2017-18 ನೇ ಶೈಕ್ಷಣಿಕ ಸಾಲಿಗೆ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಆವರಣದಲ್ಲಿ ಬರುವ 04 ವಸತಿ ನಿಲಯಗಳಿಗೆ ಮತ್ತು ಸ್ನಾತಕೋತ್ತರ ಕೇಂದ್ರ ರಾಯಚೂರದಲ್ಲಿರುವ ಒಂದು ವಸತಿ ನಿಲಯಕ್ಕೆ ಊಟದ ವ್ಯವಸ್ಥೆ ಮಾಡುವ ಕುರಿತು.

ಉಲ್ಲೇಖ: 1. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ.21-06-2017

***

ಮೇಲ್ಕಾಣಿಸಿರುವ ವಿಷಯ ಹಾಗೂ ಉಲ್ಲೇಖದ ಪ್ರಕಾರ 2017-18 ನೇ ಶೈಕ್ಷಣಿಕ ಸಾಲಿಗೆ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಆವರಣದಲ್ಲಿ ಬರುವ 04 ವಸತಿ ನಿಲಯಗಳಿಗೆ ಮತ್ತು ಸ್ನಾತಕೋತ್ತರ ಕೇಂದ್ರ ರಾಯಚೂರದಲ್ಲಿರುವ ಒಂದು ವಸತಿ ನಿಲಯಕ್ಕೆ ಊಟದ ವ್ಯವಸ್ಥೆ ಮಾಡಲು ಈ ಮೂಲಕ ಟೆಂಡರ ಕರೆಯಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧ ಪಟ್ಟ ಪ.ಜಾ/ಪ.ಪಂಗಡ ಘಟಕದ ನಿರ್ದೇಶಕರನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಲು ಸೂಚಿಸಲಾಗಿದೆ. ಟೆಂಡರ ಸಲ್ಲಿಸಲು ಕೊನೆಯ ದಿನಾಂಕ 17-07-2017 ಎಂದು ತಿಳಿಸಲಾಗಿದೆ. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (ದೂರವಾಣಿ ಸಂಖ್ಯೆ ಕಚೇರಿ: 08472-263202). ಇದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗಾಗಿ ವಿಶ್ವವಿದ್ಯಾಲಯದ ವೆಬಸೈಟ್ www.gulbargauniversity.kar.nic.in ರಲ್ಲಿ ಪಡೆಯಬಹುದು.

1. ಕೃಷ್ಣಾ ವಸತಿ ನಿಲಯ
2. ಕಾವೇರಿ ವಸತಿ ನಿಲಯ
3. ನೃಪತುಂಗ ವಸತಿ ನಿಲಯ
4. ಡಾ.ಬಿ.ಆರ್. ಅಂಬೇಡ್ಕರ ವಸತಿ ನಿಲಯ
5. ವಿದ್ಯಾರ್ಥಿಗಳ ವಸತಿ ನಿಲಯ ಸ್ನಾತಕೊತ್ತರ ಕೇಂದ್ರ ರಾಯಚೂರ

ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

Annexure 'A'

# ಅರ್ಜಿ ನಮೂನೆ

2017-18 ನೇ ಶೈಕ್ಷಣಿಕ ಸಾಲಿಗೆ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಆವರಣದಲ್ಲಿ ಬರುವ 04 ವಸತಿ ನಿಲಯಗಳಿಗೆ ಮತ್ತು ಸ್ನಾತಕೋತ್ತರ ಕೇಂದ್ರ ರಾಯಚೂರದಲ್ಲಿರುವ ಒಂದು ವಸತಿ ನಿಲಯಕ್ಕೆ ಊಟದ ವ್ಯವಸ್ಥೆ ಮಾಡಬೇಕಾದ ವಿವರದ ಪಟ್ಟಿ.

| ಕ್ರ.ಸಂ. | ಊಟದ ವಿವರ | ಷರಾ |
|---|---|---|
| 1. | ಚಪಾತಿ / ರೊಟ್ಟಿ 3 | |
| 2. | ಅನ್ನ ಫುಲ್ (ಮದರ ಇಂಡಿಯಾ) | |
| 3. | ಎರಡು ವಿಧದ ಪಲ್ಲೆ ಮತ್ತು ಸಾರು | |
| 4. | ಮೊಸರು ಹಾಗೂ ಉಪ್ಪಿನಕಾಯಿ | |
| 5. | ಪ್ರತಿ ದಿನ ಎರಡು ಊಟ ಮತ್ತು ಒಂದು ಟಿಫಿನ್ | |
| 6. | ಪ್ರತಿ ತಿಂಗಳು ಕೊನೆಯ ರವಿವಾರ ವಿಶೇಷ ಊಟ (ಸ್ವೀಟ್) | |

ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

## Annexure 'B'

### ಊಟದ ವ್ಯವಸ್ಥೆ ಮಾಡುವಾಗ ಈ ಕೆಳಗಿನ ನಿಯಮಗಳನ್ನು ಪಾಲನೆಮಾಡತಕ್ಕದ್ದು.

1. ಒಂದು ತಿಂಗಳಿಗೆ ಒಬ್ಬ ವಿದ್ಯಾರ್ಥಿಗೆ ರೂ.1500/-ರಂತೆ ಹಣ ಪಾವತಿಸಲಾಗುವುದು. ಮತ್ತು ವಿದ್ಯಾರ್ಥಿಗಳ ಪ್ರತಿದಿನದ ಊಟದ ಲೆಕ್ಕವಿಡಲು ಕೋರಲಾಗಿದೆ. ಅದನ್ನು ಪರಿಪಾಲಕರಿಗೆ ಒಪ್ಪಿಸಿ ಪ್ರತಿ ತಿಂಗಳು ಬಿಲ್ ಧೃಢೀಕರಿಸಿ ಪಜಾ/ಪಪಂ ಘಟಕಕ್ಕೆ ಸಲ್ಲಿಸಬೇಕು.
2. ಊಟದ ಸ್ಯಾಂಪಲನ್ನು ಕೇಳಿದಾಗ ಕುಲಸಚಿವರ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು.
3. ಊಟ ಒಳ್ಳೆಯ ಗುಣಮಟ್ಟ ಹೊಂದಿರತಕ್ಕದ್ದು. ಒಂದು ವೇಳೆ ಕಳಪೆ ದರ್ಜೆಯ ಊಟದ ವ್ಯವಸ್ಥೆ ಮಾಡಿದಲ್ಲಿ ಒಪ್ಪಂದವನ್ನು ಸ್ಥಗಿತಗೊಳಿಸಲಾಗುವುದು. ಅದಕ್ಕೆ ತಗಲುವ ವೆಚ್ಚವನ್ನು ತಾವೇ ಭರಿಸಬೇಕಾಗುತ್ತದೆ.
4. ಟೆಂಡರ ಅವಧಿಯು ಒಂದು ವರ್ಷದಾಗಿದ್ದು ಊಟವನ್ನು ಆಯಾ ವಸತಿ ನಿಲಯದ ಅಡುಗೆ ಮನೆಯಲ್ಲಿ ಸಿದ್ದಪಡಿಸಿ ಆಯಾ ವಸತಿನಿಲಯಗಳ ಊಟದ ಕೋಣೆಗೆ ತಲುಪಿಸುವ ಬಡಿಸುವ ವ್ಯವಸ್ಥೆ ಮಾಡಲು ಬದ್ದರಾಗಿರಬೇಕು.
5. ಎಲ್ಲಾ ವಸತಿ ನಿಲಯಗಳಲ್ಲಿ ಅಡುಗೆ ಸಾಮಗ್ರಿಗಳನ್ನು ಪರಿಪಾಲಕರಿಂದ ತೆಗೆದುಕೊಂಡು ತಮ್ಮ ಟೆಂಡರ ಅವಧಿ ಮುಗಿದ ಮೇಲೆ ಯಥಾಸ್ಥಿತಿ ಪರಿಪಾಲಕರಿಗೆ ಒಪ್ಪಿಸಲು ಕೋರಲಾಗಿದೆ. ಹೆಚ್ಚಿನ ಸಾಮಗ್ರಿಗಳು ಬೇಕಾದಲ್ಲಿ ತಾವೇ ಖರೀದಿಸಬೇಕು.
6. ಸಾಮಾನ್ಯ ವಿದ್ಯಾರ್ಥಿಗಳ ಊಟದ ವೆಚ್ಚವನ್ನು ಪ್ರತಿ ತಿಂಗಳು ಸಂಬಂಧಪಟ್ಟ ಟೆಂಡರದಾರರು ವಿದ್ಯಾರ್ಥಿಗಳಿಂದ ಜಮಾಮಾಡಿಕೊಂಡು ಊಟದ ವ್ಯವಸ್ಥೆ ಮಾಡಲು ಟೆಂಡರದಾರರಿಗೆ ತಿಳಿಸಲಾಗಿದೆ. ಪಜಾ/ಪಪಂ ವಿದ್ಯರ್ಥಿಗಳ ಬಿಲ್ಲನ್ನು ಮಾತ್ರ ನಮ್ಮಿಂದ (ಪಜಾ/ಪಪಂ ಘಟಕ) ಪಾವತಿಸಲಾಗುತ್ತದೆ.
7. **ಠೇವಣಿ (E.M.D.) ರೂ.2.00,000/- (ರೂಪಾಯಿ ಎರಡು ಲಕ್ಷ ಮಾತ್ರ)** ಡಿ.ಡಿ.ಸಲ್ಲಿಸಬೇಕು. ಡಿ.ಡಿ. ಸಲ್ಲಿಸದಿರುವ ಟೆಂಡರಗಳನ್ನು ತಿರಸ್ಕರಿಸಲಾಗುವುದು. ಅದಕ್ಕೆ ಯಾವುದೆ ಪತ್ರವ್ಯವಹಾರಕ್ಕೆ ಅವಕಾಶವಿರುವುದಿಲ್ಲ.
8. ಟೆಂಡರ ಸ್ವೀಕೃತಗೊಂಡ ನಂತರ ಯಾವುದೇ ಕಾರಣಕ್ಕೆ ಊಟದ ವ್ಯವಸ್ಥೆ ಸ್ಥಗಿತಗೊಳಿಸಿದಲ್ಲಿ ಠೇವಣಿ ಹಣ ಹಿಂದಿರುಗಿಸುವುದಿಲ್ಲ.
9. ರೂ.1500/- ಕಿಂತಲೂ ಕಡಿಮೆ ದರದಲ್ಲಿ ಊಟದ ವ್ಯವಸ್ಥೆ ಮಾಡುವವರಿಗೆ ಆದ್ಯತೆ ನೀಡಲಾಗುತ್ತದೆ.
10. **ಟೆಂಡರ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿದೆ.**

1. ಊಟದ ಸರಬರಾಜು ಮಾಡಲು ಪಡೆದ ಪರವಾನಿಗೆ ಪ್ರಮಾಣ ಪತ್ರ ಸಲ್ಲಿಸಬೇಕು.
2. TIN ನಂ. ಹೊಂದಿರಬೇಕು.
3. ರೂ.1,00,000/- ವಹಿವಾಟು ಮಾಡಿದ ಬಗ್ಗೆ Balance Sheet ಹೊಂದಿರಬೇಕು.
4. 5 ವರ್ಷ ಉನ್ನತ ಶಿಕ್ಷಣ ಸಂಸ್ಥೆ/ವಸತಿನಿಲಯಗಳಿಗೆ ಊಟದ ವ್ಯವಸ್ಥೆ ಮಾಡಿರುವ ಬಗ್ಗೆ ಅನುಭವ ಪುರಾವೆಗಳು ಹೊಂದಿರಬೇಕು.
5. ಊಟದ ಗೃಹದ ಸಂಖ್ಯೆ ಕಡ್ಡಾಯವಾಗಿ ಹೊಂದಿರಬೇಕು. ಮತ್ತು ಅದಕ್ಕೆ ಸಂಬಂಧಿಸಿದ ದಾಖಲೆ ಲಗತ್ತಿಸಬೇಕು.
6. ಊಟದ ಗೃಹದ ಟ್ಯಾಕ್ಸ್ ಪೇಡ್ ರಶೀದಿ ಲಗತ್ತಿಸಬೇಕು.
7. ಅಡಿಗೆ ಕೆಲಸಗಾರರಿಂದ ಕೆಲಸ ತೆಗೆದುಕೊಂಡು ಅವರಿಗೆ ಪ್ರತಿತಿಂಗಳು ಸಂಬಳ ತಾವೇ ಭರಿಸಬೇಕು.
8. ಹೆಣ್ಣುಮಕ್ಕಳ ವಸತಿನಿಲಯಲಗಳಿಗೆ ಊಟ ಸರಬರಾಜು ಮಾಡಲು ಮಹಿಳಾ ಸಂಘಸಂಸ್ಥೆಗಳಿಗೆ ಆಧ್ಯತೆ ನೀಡಲಾಗುತ್ತದೆ.

ಮೇಲಿನ ಎಲ್ಲಾ ಕರಾರುಗಳಿಗೆ ಒಪ್ಪಿಕೊಂಡು ಊಟ ವ್ಯವಸ್ಥೆ ಮಾಡುವ ಆಸಕ್ತರು ಅರ್ಜಿ ಹಾಕಬಹುದು.

30/6/14

ಕುಲಸಚಿವರು

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ